ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ., ದಂಡಾಧಿಕಾರಿಗಳವರ
ನ್ಯಾಯಾಲಯ, ಕೃಷ್ಣರಾಜಪೇಟೆ

ಸಿ.ಸಿ. ನಂ. **457/2016**

| | | |
|---|---|---|
| ಸಾಕ್ಷಿದಾರರ ಹೆಸರು | ರಾಮಕೃಷ್ಣ | ಡಿ.ಡಬ್ಲ್ಯೂ - 1 |
| ತಂದೆಯ/ಗಂಡನ ಹೆಸರು | ರುದ್ರಯ್ಯ | |
| ವಯಸ್ಸು | 65 ವರ್ಷ | |
| ವೃತ್ತಿ | ಸಲೂನ ಶಾಪ್ | |
| ವಾಸ ಸ್ಥಳ | ಹೊಸಹೊಳಲು | |

ಸಾಕ್ಷಿಗೆ ದಿನಾಂಕಃ **22.09.2025** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಶ್ರೀ. ಬಿ.ಜಿ ವಕೀಲರಿಂದ ಆರೋಪಿ ಪರ,

ಪಿರ್ಯಾದಿ ನನ್ನ ಅಂಗಡಿಯ ಪಕ್ಕ ಅಂಗಡಿ ಇಟ್ಟುಕೊಂಡಿರುತ್ತಾರೆ. ಚೀಟಿ ವ್ಯವಹಾರದ ಸಲುವಾಗಿ ಪಿರ್ಯಾದಿಯ ಪರಿಚಯ ಆಗಿರುತ್ತದೆ. ರೂ. 1 ಲಕ್ಷಕ್ಕೆ ಚೀಟಿ ವ್ಯವಹಾರ ಮಾಡಲಾಗಿರುತ್ತದೆ. ತಿಂಗಳಿಗೊಮ್ಮೆ ರೂ. 5000/- ಹಣವನ್ನು ಕಟ್ಟುತ್ತಿದ್ದೇನು. ರೂ. 70,000/- ಗಳನ್ನು ಇದುವರೆಗೂ ಕಟ್ಟಿರುತ್ತೇನೆ. ಸದರಿ ಹಣವನ್ನು ನಾನು ತೆಗೆದುಕೊಂಡಿರುತ್ತೇನೆ. ರೂ. 54000/- ಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಹಣವನ್ನು ಪಡೆದುಕೊಳ್ಳುವಾಗ ಒಂದು ಖಾಲಿ ಚೆಕ್ಕು ಹಾಗೂ ಒಂದು ಖಾಲಿ ಛಾಪಾ ಕಾಗದವನ್ನು ನೀಡಿರುತ್ತೇನೆ.

2. ತಿಮ್ಮೇಗೌಡರಿಗೆ ನಾನು ಉಳಿದ ರೂ.30,000/- ಚೀಟಿ ಹಣವನ್ನು ಕೊಡಬೇಕಾಗಿದ್ದು, ಸದರಿ ಹಣವನ್ನು ನಾನು ನೀಡಿರುವುದಿಲ್ಲ. ಚೀಟಿ ವ್ಯವಹಾರವನ್ನು ಹೊರತು ಪಡಿಸಿ ಬೇರೆ ಯಾವುದೇ ವ್ಯವಹಾರವನ್ನು ನಾನು ಮಾಡಿರುವುದಿಲ್ಲ. ಸದರಿ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ನನ್ನ ವಿರುದ್ಧ ಸದರಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಸದರಿ ಹಣವನ್ನು

ನಾನು ಪಿರ್ಯಾದಿಯಿಂದ ಪಡೆದುಕೊಂಡಿರುವುದಿಲ್ಲ. ಆದ್ದರಿಂದ ನನ್ನನ್ನು ಸದರಿ ಪ್ರಕರಣದಿಂದ ದೋಷ ಮುಕ್ತನೆಂದು ಘೋಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಃ ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ**

ಅಪರ **ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ .**